ಖಂಡಿತವಾಗಿ ಇದ್ದಾರೆ. ಒಳ್ಳೆಯ ಸಂಪಾದಕರು ಬಹುದೊಡ್ಡ ವ್ಯತ್ಯಾಸ ತರಬಲ್ಲರು. ಅಂತಹ ಸಂಪಾದಕರನ್ನು ಹುಡುಕಿಕೊಳ್ಳುವುದು ಯಾವಾಗಲೂ ಒಳ್ಳೆಯದು. ಅದರ ಬೆಲೆ ನಿಮಗಂಥವರು ಸಿಕ್ಕಾಗ ತಿಳಿಯುತ್ತದೆ.

◆ **ಇಲ್ಲಿಯವರೆಗೆ ನೀವು ಕೆಲಸ ಮಾಡಿರುವವರಲ್ಲಿ ಯಾರು ಆ ರೀತಿಯ ಸಂಪಾದಕ?**

ಬಾಬ್ ಗಾಟ್ಲೀಬ್ ತರಹದ ಬಹಳ ಒಳ್ಳೆಯ ಸಂಪಾದಕರು ನಂಗೆ ಸಿಕ್ಕಿದರು. ಅವರು ನನ್ನ ಬರವಣಿಗೆಯನ್ನು ಹಲವು ರೀತಿಯಲ್ಲಿ ತಿದ್ದಿ ರೂಪಿಸಿದರು. ಒಳ್ಳೆಯ ಸಂಪಾದಕರು ಮೂರನೆಯ ಕಣ್ಣಿದ್ದಂತೆ. ಅವರು ನಿಮ್ಮನ್ನಾಗಲಿ ನಿಮ್ಮ ಕೃತಿಯನ್ನಾಗಲಿ ಪ್ರೀತಿಸುವುದಿಲ್ಲ. ಇದೊಂದು ವಿಲಕ್ಷಣ ಪ್ರಕ್ರಿಯೆ. ಕೆಲವೊಮ್ಮೆ ಲೇಖಕನಿಗೆ ದುರ್ಬಲ ಅನ್ನಿಸಿದ ಭಾಗವನ್ನೇ ಸಂಪಾದಕ ಬೊಟ್ಟು ಮಾಡಿ ತೋರಬಹುದು ಅಥವ ಲೇಖಕ ದುರ್ಬಲ ಅಂದುಕೊಳ್ಳದ ಭಾಗದ ಕಡೆ ಗಮನಸೆಳೆಯಬಹುದು. ಒಳ್ಳೆಯ ಸಂಪಾದಕರು ತಿದ್ದಿಕೊಳ್ಳಲು ಸಲಹೆಗಳನ್ನು ಕೊಡಬಹುದು. ಎಲ್ಲವನ್ನೂ ನೀವು ಒಪ್ಪಬೇಕಾಗಿಲ್ಲ. ಆದರೆ, ಆ ಸಂಬಂಧದ ನಡುವೆ ನಂಬಿಕೆಯಿದೆ, ಕೇಳಿಸಿಕೊಳ್ಳುವ ಸಹೃದಯತೆಯಿದೆ. ಅಂಥಲ್ಲಿ ಅದ್ಭುತಗಳು ಘಟಿಸಬಹುದು.

◆ **ಬರೆದದ್ದನ್ನು ಓದಿ, ತಿದ್ದಿ ಬರೆಯುವುದು ಬರವಣಿಗೆಯ ಪ್ರಕ್ರಿಯೆಯಲ್ಲಿ ಬಹಳ ಮುಖ್ಯ ಅಂತ ವಿದ್ಯಾರ್ಥಿಗಳಿಗೆ ಹೇಳುತ್ತಿರುತ್ತೀರಿ. ನಿಮಗೆ ಕೃತಿಯ ಮೊದಲ ಕರಡು ಹೆಚ್ಚು ಖುಷಿ ಕೊಡುತ್ತದೆಯೋ ಇಲ್ಲ ತಿದ್ದಿ ಬರೆದ ಬರವಣಿಗೆಯೋ?**

ಅವೆರೆಡೂ ಬೇರೆ ಬೇರೆ. ಬರೆಯುವುದಕ್ಕೂ ಮೊದಲು ಐಡಿಯಾ ಹೊಳೆಯುತ್ತದಲ್ಲ ಅದು ಹೆಚ್ಚು ರೋಮಾಂಚನ ಹುಟ್ಟಿಸುತ್ತದೆ.

◆ **ಆ ಐಡಿಯಾ ಮಿಂಚಿನಂತೆ ಸುಳಿಯುತ್ತದೆಯೇ?**

ಇಲ್ಲ. ನಿರಂತರವಾಗಿ ಯೋಚಿಸುತ್ತಾ ಯೋಚಿಸುತ್ತಾ ಒಡಮೂಡುತ್ತದೆ. ಕೆಲವೊಮ್ಮೆ ಉತ್ತರವಿಲ್ಲದ ಪ್ರಶ್ನೆಯಂತಿರುತ್ತದೆ. '**Beloved**' ತ್ರಿವಳಿಯಲ್ಲಿ ಕೊನೆಯದನ್ನು ಬರೆಯುವಾಗ ನನಗಿಂತ ಇಪ್ಪತ್ತು, ಮೂವತ್ತು ವರ್ಷ ಚಿಕ್ಕವರಾದ ಹೆಂಗಸರು ಕೂಡ ಸಂತೋಷವಾಗಿಲ್ಲವಲ್ಲ ಯಾಕೆ? ಅವರಿಗೆ ಎಷ್ಟೊಂದು ಆಯ್ಕೆಗಳಿವೆ, ಮಾಡಲು ಎಷ್ಟೊಂದು ಕೆಲಸಗಳಿವೆ. ಆದರೂ ಹೀಗೇಕೆ? ಯಾಕೆ ಎಲ್ಲರೂ ಇಷ್ಟು ನರಳುತ್ತಿದ್ದಾರೆ? ಅಂತೆಲ್ಲ ಕಾಡುತ್ತಿತ್ತು.

◆ **ನಿಮಗನ್ನಿಸಿದ್ದನ್ನು ಸ್ಪಷ್ಟಗೊಳಿಸಿಕೊಳ್ಳುವ ಸಲುವಾಗಿಯೇ ಬರೆಯುವಿರಾ?**

ಇಲ್ಲ. ಎಲ್ಲರಂತೆ ನನ್ನ ಭಾವನೆಗಳು ಪೂರ್ವಗ್ರಹಗಳು, ನಂಬಿಕೆಗಳಿಂದಲೇ ಹುಟ್ಟಿದ್ದು. ಐಡಿಯಾದ ಸೂಕ್ಷ್ಮತೆ ಹಾಗೂ ಸಂಕೀರ್ಣತೆಯ ಬಗ್ಗೆ ನಂಗೆ ಆಸಕ್ತಿ. "ನನ್ನ ನಂಬಿಕೆ ಇದು" ಎನ್ನಲು ಅದು ಕರಪತ್ರವಲ್ಲ, ಅದೊಂದು ಪುಸ್ತಕ. "ಇದು ನನ್ನ ನಂಬಿಕೆಯಾಗಿರಬಹುದು, ತಪ್ಪು ಕೂಡ ಆಗಿರಬಹುದು... ಹಾಗಾದರೆ ಅದೇನಿರಬಹುದು?" ಅಥವ "ಅದೇನು ಅಂತ ಗೊತ್ತಿಲ್ಲ. ನನಗೆ ಮತ್ತು ಇತರರಿಗೆ ಅದರ ಬಗ್ಗೆ ಏನನ್ನಿಸಬಹುದು ಅಂತ ಹುಡುಕುವುದರಲ್ಲಿ ನಂಗೆ ಆಸಕ್ತಿಯಿದೆ" ಎನ್ನುವುದು ಪುಸ್ತಕ.

◆ **ಬಾಲ್ಯದಿಂದಲೇ ಲೇಖಕಿಯಾಗಬೇಕು ಅಂದುಕೊಂಡಿದ್ದಿರಾ?**